## ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 582/2025**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿ ಃ ಸಾಬಣ್ಣ ತಂದೆ ದೇವಿಂದ್ರಪ್ಪ**

## ದೋಷಾರೋಪಣೆ

ನಾನು **ಶ್ರೀ ರಾಹುಲ ರಾವ್, ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ. ಆರೋಪಿಯಾದ**

| | |
|---|---|
| ಆರೋಪಿ. | ಸಾಬಣ್ಣ ತಂದೆ ದೇವಿಂದ್ರಪ್ಪ<br>ವಃ 35 ವರ್ಷ,<br>ಉಃ ಅರಿಕೇರಿ (ಬಿ) ಗ್ರಾಮ ,<br>ತಾಃ ಮತ್ತು ಜಿಃ ಯಾದಗಿರಿ. |

**ಆದ ನಿನ್ನ ವಿರುದ್ಧ ದೋಷಿಸುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 30-01-2025 ರಂದು ಸಾಃ 05-30 ಗಂಟೆ ಸುಮಾರಿಗೆ ಯಾದಗಿರಿ (ಗ್ರಾ) ಪೋಲಿಸ್ ಠಾಣೆಯ ಹದ್ದಿಯಲ್ಲಿ ಬರುವ ಅರಿಕೆರಿ(ಬಿ) ಗ್ರಾಮದ ಆರೋಪಿಯಾದ ನೀನು ನಿನ್ನ ಮನೆಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ 50 ಲೀಟರ ಕಲಬೆರಿಕೆ ಸೇಂಧಿಯನ್ನು ಸಂಗ್ರಹಿಸಿ ಇಟ್ಟಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸರ್ಕಾರದಿಂದ ಯಾವುದೇ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಸಾರ್ವಜನಿಕರಿಗೆ ಕುಡಿಯಲು ಮಾರಾಟ ಮಾಡುತ್ತಿದ್ದು, ಈ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

3. ಮೂರನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಅರಿಕೆರಿ(ಬಿ) ಗ್ರಾಮದ ನಿನ್ನ ಮನೆಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಕಲಬೇರಿಕೆ ಸಿಂದಿ ಮಾರಾಟ ನಿಷೇಧ ಇದ್ದದ್ದು ಗೊತ್ತಿದ್ದರು ಸಹ ವಿಷಕಾರಕ ಸಿಂದಿಯನ್ನು ಅಕ್ರಮವಾಗಿ ಮಾನವನು ಸೇವಿಸಿದರೆ ಜೀವಕ್ಕೆ ಹಾನಿಯುಂಟಾಗುವ ಹೆಂಡ ಮಾರಾಟ ಮಾಡುತ್ತಿದ್ದು, ಈ ಮೂಲಕ ನೀನು ಭಾ. ದಂ. ಸಂ.ಕಲಂ. 286, ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

4. ನಾಲ್ಕನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಅರಿಕೆರಿ(ಬಿ) ಗ್ರಾಮದ ನಿನ್ನ ಮನೆಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಕಲಬೇರಿಕೆ ಸಿಂದಿ ಮಾರಾಟ ನಿಷೇಧ ಇದ್ದದ್ದು ಗೊತ್ತಿದ್ದರು ಸಹ ವಿಷಕಾರಕ ಸಿಂದಿಯನ್ನು ಮಾರಾಟ ಮಾಡಲು ಇಟ್ಟಿದ್ದು, ಈ ಮೂಲಕ ನೀನು ಭಾ. ದಂ. ಸಂ.ಕಲಂ. 275 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

**ದಿನಾಂಕಃ 24-12-2025**
**ಸ್ಥಳಃ ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ**
**ನ್ಯಾಯಾಧೀಶರು ಯಾದಗಿರಿ.**